ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ತಾರೀಖು 16ನೆ ಮಾರ್ಚಿ 1904.

ಪ್ರಸಿದ್ಧ ಪತ್ರಿಕೆ.

ಇದರಿಂದ ಸರ್ವಸ್ಥ ಜನಗಳಿಗೂ ತಿಳಿಯಪಡಿಸುವದೇನಂದರೆ,—ಪೂರ್ವ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚರಾವನ್ನ ಇದರೊಡನೆ ಜಂಟಿಸಿರುವ ಪಟ್ಟೀ ಮೇರೆಗೆ ರೂಢಿಸಿಕೊಳ್ಳುವ ಬಗ್ಗೆ ಸ೯ 1904ನೆ ಇಸವಿ ಜುಲೈ ಗುರ್ಯೇ ಲಾಗಾಯಿತು 1905ನೆ ಇಸವಿ ಜೂ ಆಖೈರ್ ತನಹು ಇದರಡಿ ಕಂಡಿರುವ ಷರತ್ತುಗಳನ್ನ ಅನುಸರಿಸಿ ಏಪ್ರೆಲ್ 16ನೆ ತಾರೀಖು ಶನಿವಾರ ಪಿ ಎ 2 ಘಂಟೆಗೆ ಬೋರ್ಡು ಆಫೀಸಿನಲ್ಲಿ ಸರಾಜು ಮಾಡಲ್ಪಡುತ್ತಾಗಿ ಇದನ್ನ ದರಖಾಸ್ತು ಮಾಡಿ ತೆಗದುಕೊಳ್ಳತಕ್ಕ ಇಷ್ಟವುಳ್ಳವರು ಹಾಜರಾಗಿ ಸಮಾಲ್ಮಾಡಿ ತೆಗದುಕೊಳ್ಳಬಹುದು. ಛಡ ಸವಾಲ್ದಾರನ ಸವಾಲ್ ಖೈದಾದ ಕೂಡ್ಲೆ ಕೇಕಡಾ 25 ರೂಪಾಯಿ ಮೇರೆಗೆ ಆಗುವ ಮೊಬಲಗನ್ನ ಡಿಪಾಜಿಟ್ ಹಾಜರ್ಮಾಡಬೇಕು. ತಪ್ಪಿದಲ್ಲಿ ಸದರೀ ಸವಾಲ್ ಕ್ಯಾನ್ಸಲ್ಮಾಡಲ್ಪಟ್ಟು ಬೂಮು ಪುನಹ ಹರಾಜ್ ಮಾಡಿಸುವದರಲ್ಲಿ ಉಂಟಾಗುವ ನುಕ್ಸಾನು ಅವಲ್ ದರಖಾಸ್ತುದಾರನಿಂದಲೇ ವಸೂಲ್ಮಾಡಲ್ಪಡುತ್ತ. ಎಲ್ಲಾ ಸವಾಲ್‌ಗಿಂತ ಹೆಚ್ಚಾದ ಅಥವಾ ಇನ್ಯಾವ ಸವಾಲನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನು ತೋರಿಸದೆ ಯಾವ ಸವಾಲನ್ನೇ ಆಗಲಿ ನಿರಾಕರಿಸಬಹುದು.

ಷರತ್ತುಗಳು.

1. ಆಯಾಯ ಡಿವಿಜ್ಞಗೆ ಕೇರಿದ ರೋಡುಗಳಲ್ಲಿಯೂ, ಗಲ್ಲಿಗಳಲ್ಲಿಯೂ ಸಹ ಸ್ವೀಪರಿಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮತ್ತು ರಸ್ತೆ ಬಾಜೂಲ್ಲಿ ಜಮಾಯಿಸಲ್ಪಡುವ ಕಚರಾವನ್ನ, ಮಳಿಕಾಲದಲ್ಲಿಯೂ ಬೇಸಿಗೆಕಾಲದಲ್ಲಿಯೂ ಸಹ ಬೆಳ್ಗೆ 5 ಘಂಟೆ ಲಾಗಾಯಿತು 9 ಘಂಟೆ ವಂಗೂ, ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರಿಗೂ ಒಂದು ದಿವಸ್ವೂ ತಪ್ಪದೆ ಕ್ರಮಬದ್ಧವಾದ ಕಾಲಕ್ಕೆ ಸರಿಯಾಗಿ ಆಯಾಯ ದಿವಸನೇ ಟ್ರೀ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೀನಾ ಹೆಲ್ತ್ ಆಫೀಸರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ್ಮಾನೆ ಕೊಡುವದಕ್ಕೆ ಒಪ್ಪಿರಾಗಿರಬೇಕು. ಮತ್ತು ಆ ಪ್ರಕಾರ ಕಚರಾವನ್ನ ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನ ಇಡಿಸಿ ಮ್ಯುನಿಸಿಪಲ್ ಅಧಿಕಾರಿಸ್ಥರು ತೆಗದು ಹಾಕುವದಕ್ಕೆ ತಗಲುವ ಲಾಗವಡು ಎಷ್ಟು ಆಗುತ್ತದೆಯೋ ಅದನ್ನು ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಭಾಗದ ಸರಹದ್ದಿನಲ್ಲಿ ಮ್ಯುನಿಸಿಪಲ್ ಮೂರೀಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನ ಪ್ರತಿದಿನವೂ ಸಾಗಿಸತಕ್ಕ ಬಗ್ಗೆ ಹಾಲಿ ಗೊತ್ತಾಗಿರುವ ಮತ್ತು ಆಗಿಂದಾಗ್ಗೆ ಗೊತ್ತು ಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನ ಪ್ರತಿ ದಿವಸವೂ ಏಯಿಂದ ನೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಅಥವಾ ಕೆಲವು ಸ್ಪೆಷಿಯಲ್ ಕೇಸುಗಳಲ್ಲಿ ತಲಾ ಮಾಡಿದವ್ಯಾಳೆ ಸಾಗಿಸಿಕೊಂಡು ಪೂರ್ಣ ಮಾಡಿಸುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೆ ಕಲಂನಲ್ಲಿ ಗೊತ್ತು ಮಾಡಿರುವ ಮೇರೆಗೆ ಜುರ್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಬಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಂಡಿ ಮುಕ್ಕರಿಗಳಲ್ಲಿ ಮೊದಲು ಕಚರಾ ಹಾಕಿ ಮಧ್ಯದಲ್ಲಿ ಪಾಯಿಖಾನೆ ಗೊಬ್ಬರ ಭರ್ತೀಮಾಡಿ ಅದರಮೇಲೆ ಪುನಹ ಕಸ ಜಾಕಿ ಅದರ ದುರ್ಗಂಧ ಹೊರಗೆ ಬಾರದಂತೆಯೂ, ದಾರಿಗಳಲ್ಲಿ ಚಲ್ಲದಂತೆಯೂ ಮುಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು. ಮತ್ತು ಮುಕ್ಕರಿಯ ಕಸದಮೇಲೆ ಚಾಪೆಯಿಂದ ಕಾಣದಂತೆ, ಮುಚ್ಚಿ ಇರಬೇಕು.

4. ಭಂಡಿಗಳು ಮತ್ತು ಅವುಗಳ ಮೇಲೆ ಇರತಕ್ಕ ಭಂಡಿ ಮುಕ್ಕರಿಗಳೂ ಸಹ ದೊಡ್ಡವಾಗಿಯೂ ಮಜಬೂತಾಗಿಯೂ, ಸಗಣಿಯಿಂದ ಸಾರಿಸಲ್ಪಟ್ಟವಂಥವಾಗಿಯೂ ಇರಬೇಕು. ಎತ್ತುಗಳು ಎಳೇಪ್ರಾಯದವುಳ್ಳವಾಗಿ ಧೃಡವಾಗಿ ಇರಬೇಕು.

5. ದರಖಾಸ್ತು ಮಂಜೂರಾದ ನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ನಾಲ್ಕು ಖಿಸ್ತಿನಲ್ಲಿ ಅಂದರೆ 1ನೆ ಖಿಸ್ತು 1904ನೆ ಇಸವಿ ಸೆಪ್ಟಂಬರ್ ಆಖೈರ್ ವರಿಗಿನದು 1904ನೆ ಜುಲೈ 1ನೆ ತಾರೀಖಿನಲ್ಲಿಯೂ, 2ನೆ ಖಿಸ್ತು 1904ನೆ ಇಸವಿ ಡಿಸಂಬರ್ ಆಖೈರ್ ವರಿಗಿನದು 1904ನ ಇಸವಿ ಅಕ್ಟೋಬರ್ 1ನೆ ತಾರೀಖಿನಲ್ಲಿಯೂ, 3ನೆ ಖಿಸ್ತು 1905ನೆ ಮಾರ್ಚಿ ಆಖೈರ್ ವರಿಗಿನದು 1905ನೆ ಇಸವಿ ಜನವರಿ 1ನೆ ತಾರೀಖಿನಲ್ಲಿಯೂ, 4ನೆ ಖಿಸ್ತು 1905ನೆ ಜೂ ಆಖೈರು ವರಿಗಿನದು 1905ನೆ ಏಪ್ರೆಲ್ 1ನೆ ತಾರೀಖಿನಲ್ಲಿಯೂ ತಪ್ಪದೆ ಆಡ್ವಾನ್ಸಾಗಿ ಹಾಜರ್ಮಾಡಿ ರಸೀದಿ ಪಡದುಕೊಳ್ಳಬೇಕು. ಈರೀತಿ ಮೊಬಲಗು ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಒಟ್ಟು ಮೊಬಲಗನ್ನ ಬಂದೇ ಗಂಟಿನಲ್ಲಿ ಡಿಮ್ಯಾಂಡ್ ಮಾಡಿದ ಒಡನೇ ಬಿ ತಕರಾರಿ ಪಾವತಿ ಮಾಡಬೇಕು. ಇದಕ್ಕಾಗಿ ಸ್ವಾಂಪು ಕಾಗದ್ದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಎಲ್ಲಾ ಷರತ್ತುಗಳನ್ನ ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರದುಕೊಡಬೇಕು. ಈ ಷರತ್ತುಗಳ ವೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡಡುಕೊಂಡರೆ ಆ ಕೂಡ್ಲೆ ಅವನ ಕಂಟ್ರಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕಂಟ್ರಾಕ್ಟು ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವಲ್ ಕಂಟ್ರಾಕ್ಟುದಾರನನ್ನು ಗುರುಮಾಡಿ ಜಪ್ತು ಹರಾಜ್ ಮೂಲಕ ಹಣ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಕಡಿಮೆ ವಿಷಯಗಳನ್ನು ಈ ಕೆಳಗೆ ಸೈ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಶೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅವಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟುಕಾಲದಲ್ಲಿ 1ನೆ ಷರತ್ತಿನಲ್ಲಿ ಕಂಡಂತೆ ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಅಥವಾ ಖರ್ಚುಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಶೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಶೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟಿಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಶೇವಣಿ ಹಣ ಪೂರಾ ಅಥವಾ ಪೈಕಿದ್ದು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಮಿಕ್ಕಿ ಕಂಟ್ರಾಕ್ಟು ವಗ್ಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಗೈರೆಗಳನ್ನ ಬಿ ತಕರಾರು ತೆಗದುಕೊಳ್ಳಲು ಸಲೀಸು ವಿರ್ಮಾಡು ಇಡತಕ್ಕದ್ದು.

9. ಗೊಬ್ಬರದ ಭಂಡಿಗಳಿಗಾಗಿ ಮಾಫೀ ಪ್ಯಾಸುಗಳು ಬೊರಿಯಲಾರವು. ಟೋಲ್ ಗೇಟುಗಳಲ್ಲಿ ಈ ಸಿಟಿಗೆ ಸೇರಿ ಲೈಸೆನ್ಸು ಪಡೆಯದೆ ಇರುವ ಭಂಡಿಗಳು ಬಂದರೆ ಅವುಗಳಿಗಾಗಿ ಟೋಲ್ ಪಾವತಿ ಮಾಡಬೇಕು.

ನಂಬರ್.	ಡಿವಿಜ್.	ಬ್ಲಾಕ್.	ರೋಡ್‌ಗಳ ತಪಾಲ್ ಮತ್ತು ಚಕ್ಕುಬಂದಿ.
1	I	,,	1ನೆ ಡಿವಿಜ್ ನಾರದರ್ ಎಕ್ಸ್‌ಟೆರ್ಪ್ ಮೂಲೇನಹಳ್ಳಿ. ಪಿಂಡಾರ್‌ಜೆರಿ ಎಲ್ಲಾ ಸಬರ್ಬ್ ರೋಡುಗಳು ಗುಟ್ಟಹಳ್ಳಿ ಮುನಿರೆಡ್ಡಿಪಾಳ್ಯ ವಗೈರೆ ಡಿವಿಜ್‌ಗೆ ಸೇರಿದ ಎಲ್ಲಾ ಭಾಗಗಳು ರಾತ್ರಿ ಕಾಲದಲ್ಲಿ ಹಾಲ್ ಎತ್ತುತ್ತಿರುವ ಮುಂದೆ ಎತ್ತಲ್ಪಡುವ ಬಂಗಿಗಳ ಪಾಯಿಖಾನೆ ವಿನಹ.
2	II	1	ಕಿಚ್ಚೆಕೆಟ್ಟ ಛತ್ರದ ರೋಡು ಸೇರಿ ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕದ ವರೆಗೆ, ಅಲ್ಲಿಂದ ಗುಡುವೆಯ್ಯನ ಪೇಟೆ ದೊಡ್ಡರೋಡಿನಿಂದ ಬಳೇಪೇಟೆ ರೋಡಿನವರಿಗೆ, ಮತ್ತು ಉತ್ತರಕ್ಕೆ ನುಬೇದಾರ್ ಛತ್ರ ರೋಡ್ ಆಬ್ಬೆರು ವರಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
3	,,	2	ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕ ವೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಜಹಗೀರ್‌ದಾರ್ ಮನೆ ಚವುಕ ಬಳೇಪೇಟೆ ಗುಡುವೆಯ್ಯನ ಪೇಟೆ ರೋಡ್ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
4	,,	3	ತಾಲ್ಲೂಕು ಕಚೇರಿ ರೋಡ್ ಬಳೇಪೇಟೆ ಚವುಕದ ವೊದಲು ಮದರಾಸ್ ಗೂಡ್ಸ್ ಗೇಟ್ ವರಿಗೆ ಅಲ್ಲಿಂದ ರೈಲ್ವೆ ಸ್ಟೇಷನ್ ಸ್ಟ್ರಾಫ್ ಕ್ವಾರ್ಟರ್ಸ್ ವಗೈರೆ ಕಕ್ಕಸ್‌ಗಳು ಮತ್ತು ಮನೆಗಳು ಧರ್ಮಾಂಬುಧಿಕರ ಸುತ್ತ ಲೂರೋಡ್, ಹಳೆ ಸವಾರ ಲೈನಿಗೆ ಸೇರಿದ ಪೋಲೀಸ್ ಸ್ಟೇಷನ್ ವಗೈರೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
5	III	1	ಮಾರ್ಕೆಟ್ ಚವುಕದ ವೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ವೆಟೆರ್ಕಲ್ ರೋಡ್‌ವರಿಗೂ, ಅಲ್ಲಿಂದ ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದಿಂದ ಮಾರ್ಕೆಟ್ ಚವುಕದವರಿಗೆ, ಈ ಮಧ್ಯೆ ಗುಂಡೋಪಂತರ ರೋಡ್, ತರಗಿನಪೇಟೆ, ಮಾವಿನಕೆರೆಪೇಟೆ ರಸ್ತೆಗಳು, ಬಳಗಲ್ಲಿಗಳು.
	,,	2	ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದ ವೊದಲು ಪೋಲೀಸ್ ರೋಡ್ ಅಕ್ಕಿಪೇಟೆ ರೋಡ್ ವರಿಗೂ. ಅಲ್ಲಿಂದ ಅಕ್ಕಿಪೇಟೆ ರೋಡ್ ಅನಾವುತ್ತು ತಾಲ್ಲೂಕು ಕಚೇರಿ ರೋಡ್ ರಾಘವಾಚಾರ್ಲು ಮನೆ ಬಳಿ ಚವುಕದಿಂದ ತಾಲ್ಲೂಕು ಕಚೇರಿ ರೋಡ್ ವೆಟೆರ್ಕಲ್ಲು ರೋಡ್ ಚವುಕದವರಿಗೂ, ಈ ಮಧ್ಯೆ ಇರುವ ಜಂಖಾನಪೇಟೆ, ಸುಲ್ತಾನ್‌ಪೇಟೆ, ಸಂತೂಸಾಪೇಟೆ, ಮನವಾರ್ತೀಪೇಟೆ ರೋಡ್‌ಗಳು, ಗಲ್ಲಿಗಳು.
7	,,	3	ಪೋಲೀಸ್ ರೋಡ್ ಅಕ್ಕಿಪೇಟೆ ಚವುಕದ ಲಾಗಾಯಿತು ತೋಟದ್ದೇವರ ಮಠದ ವರಿಗೂ, ಅಲ್ಲಿಂದಾ ಊರ್ಮಿಲ್ ಟ್ಯಾಂಕ್ ಬಂಡ್ ರೋಡ್ ಮೈಸೂರು ರೈಲ್ವೆ ಗೂಡ್ಸ್‌ಗೇಟ್ ತಾಲ್ಲೂಕ್ ಕಚೇರಿ ರೋಡ್ ಅಕ್ಕಿಪೇಟೆ ಚವುಕದವರಿಗೆ. ಈ ಮಧ್ಯೆ ಇರುವ ಗಾರ್ಡ್‌ಪೇಟೆ, ಆರಳೀಪೇಟೆ ಅಕ್ಕಿಪೇಟೆ ಗಲ್ಲಿಗಳು, ರಸ್ತೆಗಳು.
8	,,	4	ತರಕಾರಿ ಮಾರ್ಕೆಟ್‌ಬಳಿ ಆಸ್ಪತ್ರೆ ವೊದಲು ಮೈಸೂರು ರೋಡ್ ಬೂರ್ಲ್ಬ್‌ವರಿಗೂ, ಅಲ್ಲಿಂದ ಕೆಂಗೇರಿ ಬಾಗಲ್ ಪೋಲೀಸ್ ಸ್ಟೇಷನ್‌ವರಿಗೆ, ಸ್ಟೇಷನ್ನಿಂದ ರಾಣಾಸಿಂಗನ ಪೇಟೆ ಬೇಲಿ. ಈ ಮಧ್ಯೆ ಇರುವ ರಸ್ತೆಗಳು, ಗಲ್ಲಿಗಳು ಮತ್ತು ಹಳೇ ಬಾರ್ ಲೈಬ್ರರಿ ಬಾಜು ಇರುವ ಪೇರ್ಸ ಲೈನ್, ಚಲವಾದಿ ಪಾಳ್ಯ ವಗೈರೆ.
9	IV	1	ಹಲಸೂರು ಗೇಟ್ ಪೋಲೀಸ್ ಸ್ಟೇಷನ್ ವೊದಲು ತಾಲ್ಲೂಕ್ ಕಚೇರಿ ರೋಡ್ ನಗರ್ತರ ಪೇಟೆ ಅಣ್ಣಯ್ಯಪ್ಪ ಕೆಟ್ಟರ ಮನೆವರಿಗೂ, ಅಲ್ಲಿಂದಾ ಉತ್ತರಕ್ಕೆ ಸ್ಯಬಕೆಟ್ಟರ ಗಲ್ಲಿಯಿಂದಾ ಜುಮ್ಮಾ ಮಸೀತಿ ಮುಂಭಾಗದಿಂದ ನಾರಾಯಣಕೆಟ್ಟ ಪೇಟೆ ರೋಡ್ ಸೇರಿ ಕಬ್ಬನ್‌ಪೇಟೆ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ, ಅಲ್ಲಿಂದಾ ಕಬ್ಬನಾಬರಪೇಟೆ ರೋಡ್ ಸೇರಿ ಹಲಸೂರು ಗೇಟಿನ ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
10	,,	2	ನಗರ್ತರಪೇಟೆ ಅಣ್ಣಯ್ಯಪ್ಪಕೆಟ್ಟರ ಮನೆ ಲಾಗಾಯಿತು ದೊಡ್ಡಪೇಟೆ ಚವುಕ ಅವಿನ್ಯೂ ರೋಡ್ ಕೇರಿ ಎಲಹಂಕದ ಬಾಗಲ್ ಪೋಲೀಸ್ ಸ್ಟೇಷನ್‌ವರಿಗೂ, ಅಲ್ಲಿಂದ ಡಿಸ್ಟ್ರಿಕ್ಟ್ ಆಫೀಸ್ ರೋಡ್ ಸೆನಟೂಫ್ ಕಬ್ಬನ್‌ರೋಡ್ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ. ಈ ಮಧ್ಯೆ ಇರುವ ಚವುಡೇಶ್ವರಿ ರೋಡ್ ಪಾಂಚಾಳಪೇಟೆ ಮುಕ್ಕಳು ಬಸವಣ್ಣನ ಗುಡಿ ರೋಡ್ ಕವಾಡಿ ರೇವಣ್ಣನಪೇಟೆ ರಸ್ತೆಗಳು, ಗಲ್ಲಿಗಳು.

ನಂಬರ್.	ಡಿವೀರ್ಜ.	ಬ್ಲಾಕ್.	ರೋಡಿಗಳ ತಪಶೀಲಿ ಮತ್ತು ಚಕ್ಕುಬಂದಿ.
11	V	2	5ನೆ ಡಿವಿಜ್ ಮಾಮೂಲ್ ಮೇರಗೆ.
12	VI	1	ಮಾರ್ಕೆಟ್ ಚವುಕದ ಮೊದಲು ಬೊಂಬು ಬಜಾರ್ ರೋಡ್, ಮಿರ್ಜರೋಡ್, ಲಾಲ್‌ಬಾಗ್ ರೋಡ್, ಬ್ಯಾಟಪ್ಪನ ತೋಪುನಿಂದ ಬಕೆಟ್ಟಭಾವಿ ಬಳಿ ಗಲ್ಲಿಯಿಂದ ಮಾವಹಳ್ಳಿ ಕೆರೆಕಟ್ಟೆ ಕಲಾಸಿ ರೋಡ್, ಹಳೇ ಪೊಲೀಸ್ ಸ್ಟೇಷ್ಯ ಚವುಕದ ವರಿಗೆ. ಈ ಮಧ್ಯೆ ಇರುವ ಅಮ್ಮಾಜವ್ವರಿ, ಪಾಳ್ಯ, ಗಂಗನ್ಮುಚೇರಿ ರಸ್ತೆಗಳು, ಗಲ್ಲಿಗಳು.
13	,,	2	ಕಲಾಸಿ ಲೈನು ಹಳೇ ಪೊಲೀಸ್ ಸ್ಟೇಷನ್ನಿಂದ ಕೊರಚರ ಪಾಳ್ಯದ ರೋಡ್ ಶಾರಂಜಿ ಕೆರೆಕಟ್ಟೆ ಬುಚ್ಚಣ್ಣನ ತೋಪುವರಿಗೂ, ಅಲ್ಲಿಂದ ಉಪ್ಪಾರಹಳ್ಳಿ, ಚಿಕ್ಕ ಮಾವಹಳ್ಳಿ, ದೊಡ್ಡ ಮಾವಹಳ್ಳಿ, ಕನಕನಪಾಳ್ಯ ಲಾಲ್‌ಬಾಗ್ ರೋಡ್ ಗೇಟಿನ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
14	VII	,,	7ನೆ ಡಿವೀರ್ಜ ಕೋಟೆ ಮಾಮೂಲ್ ಮೇರಗೆ.
15	,,	,,	ಜಾಮರಾಜೇಂದ್ರಪೇಟೆ, ಹೊಸ ತರಗಿನಪೇಟೆ, ಗುಟ್ಟಹಳ್ಳಿ, ಗವಿಪುರ, ಮಾದಿಗರ ಪಾಳ್ಯ ವಗೈರ ಡಿವಿಜ್‌ಗೆ ಸೇರಿದ ರೋಡಿಗಳು, ಗಲ್ಲಿಗಳು ಯಾವತ್ತು.
16	,,	,,	ಬಸವಣ್ಣನಗುಡಿ ಎಕ್ಸ್‌ಟೆರ್ಷ.
17	,,	,,	ಮಲ್ಲೀಶ್ವರ ಎಕ್ಸ್‌ಟೆರ್ಷ.

ಪಿ. ಪಲ್ಪ್,
ಫಾರ್ ಪ್ರೆಸಿಡೆಂಟ್.